## ನಿತ್ಯಂ ಪೊಸತು

ಕಾವ್ಯದಲ್ಲಿ ಕಾಡಿನ ಸುದೀರ್ಘವಾದ ವರ್ಣನೆಯಿದೆ. ವಿಶೇಷವೆಂದರೆ, ಪುನರುಕ್ತಿಯನ್ನೇ ಬಳಸಿ ಕಾಡಿನ ಎರಡು ವಿರುದ್ಧ ಮುಖಗಳನ್ನು ಚಿತ್ರಿಸಿರುವುದು. 'ಸಲೆ ಶಿವಮಯಂ' ಎಂದು ಆರಂಭವಾಗುವ ಈ ಷಟ್ಪದಿಯಲ್ಲಿ ಇರುವ 30 ಪದಗಳಲ್ಲಿ 24 ಸಂಸ್ಕೃತ ಪದ, ಆರು ಮಾತ್ರ ಕನ್ನಡ ಪದಗಳು. ಸಂಸ್ಕೃತ ಮೂಲದ ಶಿವಮಯಂ, ಶಿವಮಯಂ, ಶಿವಮಯಂ ಮುಂತಾದ ಪದಗಳನ್ನು ಮತ್ತೆಮತ್ತೆ ಬಳಸಿ, ಮಂತ್ರ ಪಠನೆಯ ವಾತಾವರಣದ ಮೂಲಕ ಕಾಡಿನ ರಮ್ಯತೆ, ವೈವಿಧ್ಯತೆಗಳನ್ನು ಸೃಷ್ಟಿಸಿದ್ದಾನೆ. ಇವು ಅರಣ್ಯದ ಇತ್ಯಾತ್ಮಕ ಗುಣಗಳಾದರೆ, ಮುಂದಿನ 44 ಪದಗಳ ಪದ್ಯದಲ್ಲಿ, 'ದನಿ' ಕನ್ನಡ ಶಬ್ದವನ್ನು 16 ಸಲ ಬಳಸಿ, ಆ ಪುನರುಕ್ತಿಯ ಮೂಲಕವೇ ಭಯಾನಕತೆಯನ್ನು ಕಟ್ಟಿಕೊಟ್ಟಿದ್ದಾನೆ ಕವಿ.

ನಡೆವ ದನಿ ಹರಿವ ದನಿ ಕರೆವ ದನಿ ಬಿಲ್ಲ ಜೇ<br>
ವೊಡೆವ ದನಿಯೆಸುವ ದನಿ ಬೈವ ದನಿ ಕೂಗಿ ಬೊ<br>
ಬ್ಬಿಡುವ ದನಿಯಿಱಿವ ದನಿ ಮುಱಿವ ದನಿ ತಱಿವ ದನಿ ಬೇಗೆಯುರಿವ<br>
ತುಡುಕು ದನಿ ತಿತ್ತಿರಿಯ ದನಿ ಹಱಿಯ ದನಿ ಸನ್ನೆ<br>
ಗೊಡುವ ದನಿ ಖಗಮೃಗದ ಗರ್ಜನೆಯ ದನಿಯೊಱಲಿ<br>
ಕೆಡೆವ ದನಿಗಳು ಬೆರಸಿ ಬೆಳೆಯ<br>
ಘೋರಾಣ್ಯವತಿಭಯಂಕರವಾದುದು

ಕನ್ನಡದ ಅತಿಸರಳವಾದ 'ಈ' ಪದದ ಪುನರುಕ್ತಿ ಇಲ್ಲಿ ನೋಡಿ. ಸತ್ಯಕ್ಕಾಗಿ ಏನು ಬೇಕಾದರೂ ತ್ಯಾಗ ಮಾಡುವ ಹರಿಶ್ಚಂದ್ರನಿಗೂ ತನ್ನ ಹೆಂಡತಿ, ಮಗನಿಗೆ ತಾನು ತಂದ ದುಃಸ್ಥಿತಿಯನ್ನು ಕಣ್ಣಾರೆ ಕಂಡಾಗ, ದುಃಖ ಉಮ್ಮಳಿಸಿ ಬರುತ್ತದೆ. ಆ ಭಾವವನ್ನು ಅದರ ತೀವ್ರತೆಯನ್ನು ನಾವೇ ಅನುಭವಿಸಲು ಬೇಕಾದ **immediacy** ನಿರ್ಮಾಣ ಮಾಡುತ್ತದೆ ಈ ಪುನರುಕ್ತಿ.

ತನುರುಚಿಯ ಮುಂದೆ ದಿನಪನ ಕಾಂತಿ ಕಪ್ಪಕ<br>
ಪ್ಪನೆ ಕೋಪದಿದಿರೊಳೂರ್ವಾನಳಂ ತಣ್ಣತ<br>
ಣ್ಣನೆ ಕೊಡುವ ಕೈಯಿದಿರೊಳಮರತರು ಮೆಲ್ಲಮೆಲ್ಲನೆ<br>
ಮೋಹನವನಪ್ಪಿದ<br>
ಘನರೂಪಿನಿದಿರೊಳಂಗಜರೂಪು ನೊಪ್ಪನೊ<br>
ಪ್ಪನೆ ಗಭೀರತೆಯಿದಿರೊಳಂಬುನಿಧಿ ತೆಳ್ಳತೆ<br>
ಳ್ಳನೆ ಶಾಂತಿಯಿದಿರ ಶಶಿ ಬೆಚ್ಚಬೆಚ್ಚನೆಯನೆ ಹರಿಶ್ಚಂದ್ರನೆಸೆದಿರ್ದನು

ಒಂದು ಪದವನ್ನು ಎರಡು ಬಾರಿ ಪ್ರಯೋಗಿಸಿ ಆ ಮೂಲಕ ಒಂದು ಸಂಗತಿಯ ವೈಶಿಷ್ಟ್ಯ ವರ್ಣಿಸುವ 'ಜೋಡಿ ಪದಗಳು' ಕನ್ನಡದ ಸಂಪತ್ತು. ಅದನ್ನು ಹರಿಶ್ಚಂದ್ರನ ಗುಣವಿಶೇಷಣಗಳನ್ನು ವರ್ಣಿಸಲು 'ಕಪ್ಪಕಪ್ಪನೆ', 'ಬೆಚ್ಚಬೆಚ್ಚನೆ' ಮುಂತಾದ ಜೋಡಿಪದಗಳನ್ನು ರಾಘವಾಂಕ ದುಡಿಸಿಕೊಂಡಿರುವ ರೀತಿ ಓದುಗರನ್ನು ರಂಜಿಸುತ್ತದೆ.

ಬಡತನದ ಹೊತ್ತಾನೆ ದೊರಕಿ ಫಲವೇನು ನೀ<br>
ರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು ರುಜೆ<br>
ಯಡಸಿ ಕೆಡೆದಿಹ ಹೊತ್ತು ರಂಭೆ ದೊರಕೊಂಡಲ್ಲಿ ಫಲವೇನು ಸಾವ ಹೊತ್ತು<br>
ಪೊಡವಿಯೊಡೆತನ ದೊರಕಿ ಫಲವೇನು ಕಡುವಿಸಿಲು